


# ಆಧುನಿಕ ಜಗತ್ತು ಮತ್ತು ಸ್ವಾಮಿ ವಿವೇಕಾನಂದ

**ಡಾ. ಶೈಲಜಾ ಎಚ್.ಟಿ**

**ಆಧುನಿಕ ಜಗತ್ತಿಗೆ ಸ್ವಾಮೀಜಿಯ ಉಪದೇಶಗಳು ಹೇಗೆ ಅವಶ್ಯಕ ? ಇದರ ಸರಳ ಪ್ರಾಸಂಗಿಕ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರು ಆಧುನಿಕ ಜಗತ್ತಿಗೆ ನೀಡಿರುವ ಸಂದೇಶದ ಔಚಿತ್ಯವನ್ನು ನಮ್ಮ ಮುಂದೆ ತೆರೆದಿಟ್ಟಿರುವ ಲೇಖಕಿ ಮೈಸೂರಿನ ಜೆ.ಎಸ್.ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು.**

ಶಕ್ತಿಯ ಮೇಲಿನ ಅಜ್ಞಾನದ ಮುಸುಕನ್ನು ತೆರೆದು, ಅವನನ್ನು ಶಕ್ತಿಪೂರ್ಣನನ್ನಾಗಿ, ಪುರುಷಸಿಂಹನನ್ನಾಗಿ ರೂಪಿಸಬೇಕು. ಅಂತರಾತ್ಮನ ಅನಂತಶಕ್ತಿಯ ಬೆಳವಣಿಗೆಗೆ ಗುರು ಸಹಾಯಕನಾಗಬೇಕು. ಶ್ರದ್ಧೆ, ಏಕಾಗ್ರತೆಯೇ ಯಶಸ್ಸಿನ ಸೋಪಾನ. ಬ್ರಹ್ಮಚರ್ಯದಿಂದ ಪರಿಶುದ್ಧವಾದ ಮೆದುಳಿಗೆ ಪ್ರಚಂಡ ಮಾನಸಿಕ ಶಕ್ತಿ, ಇಚ್ಛಾಶಕ್ತಿ, ಆತ್ಮಶಕ್ತಿ ಬರುತ್ತದೆ. ಗುರು ಕೇವಲ ಶಬ್ದಾಡಂಬರದಲ್ಲಿ ಮುಳುಗದೆ ಅರ್ಥಜ್ಞಾನಿಯಾಗಿಯೂ, ಪರಿಶುದ್ಧನೂ, ಸಹಜಪ್ರೇಮಿಯೂ, ನಿಃಸ್ವಾರ್ಥನೂ ಆಗಿರಬೇಕು. ವಿದ್ಯೆ ಶೀಲಪೋಷಣೆಯನ್ನು ಮಾಡಬೇಕು. ನಮ್ಮ ಅದೃಷ್ಟಕ್ಕೆ ನಾವೇ ಕಾರಣವೆಂಬುದನ್ನು ಮನುಷ್ಯರು ತಿಳಿಯಬೇಕು. ಶಾರೀರಕ ದೃಢತೆಯಿಂದ, ಮಹಾಪುರುಷರ ಆದರ್ಶದ ನೆರಳಿನಲ್ಲಿ, ಎಲ್ಲರಲ್ಲಿರುವ ಒಂದೇ ಚೈತನ್ಯಶಕ್ತಿಯನ್ನು ಕಾಣಬಲ್ಲ ದೃಷ್ಟಿ ನಮ್ಮದಾಗಬೇಕು. ಸ್ತ್ರೀಶಿಕ್ಷಣವು ಅತ್ಯವಶ್ಯ ವಾದುದು. ವಿದ್ಯೆ ಸಾರ್ವತ್ರಿಕವಾಗಬೇಕು. ದೀನರ ಏಳ್ಗೆಗಾಗಿ ದುಡಿ ಯುವುದೇ ಪೂಜೆ ಎಂಬಿತ್ಯಾದಿಯಾಗಿ ಹೇಳಿರುವ ವಿವೇಕಾನಂದರ ನುಡಿಮುತ್ತುಗಳು ಸಾರ್ವಕಾಲಿಕ ಮೌಲ್ಯವನ್ನು ಪಡೆದಿವೆ.

ಭರತಖಂಡದ ಜೀವನಾಧಾರ ಧರ್ಮವಾಗಿದೆ. ಉಪನಿಷತ್ತಿನ ಭಾವನೆಗಳು ಸುಸಂಸ್ಕೃತ ಮಾನವಕುಲಕ್ಕೆ ನಾಂದಿಯಾಗಿವೆ. ಇಂದಿನ ಜಡನಾಗರಿಕತೆಯ ಪ್ರಪಂಚಕ್ಕೆ ಅಧ್ಯಾತ್ಮಧಾರೆ ಭಾರತದಿಂದಲೇ ಉದಯಿಸಬೇಕಾಗಿದೆ ಎಂಬ ಸತ್ಯವನ್ನು ವಿವೇಕಾನಂದರು ಕಂಡುಕೊಂಡರು. ಅನ್ಯಧರ್ಮಸಹಿಷ್ಣುತೆಯೇ ಭಾರತದ ಮೂಲ ಮಂತ್ರವಾಗಿರುವುದನ್ನು ಅವರು ಗುರುತಿಸಿದರು. ಆದ್ದರಿಂದ ಹಿಂದೂಧರ್ಮದ ದೋಷಗಳನ್ನು ಹೋಗಲಾಡಿಸಿ, ಅದನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಬೇಕೆಂದರು. ಜನಸಾಮಾನ್ಯರನ್ನು ನಿರ್ಲಕ್ಷಿಸಿದುದೇ ನಮ್ಮ ಅವನತಿಗೆ ಕಾರಣವಾಗಿದೆ ಎಂದರು. ಮನುಷ್ಯರು ಮೊದಲು ದೌರ್ಬಲ್ಯದಿಂದ ಮುಕ್ತರಾಗಬೇಕು. ಮೊದಲು ಅನ್ನ, ಆಮೇಲೆ ಬ್ರಹ್ಮ. ಹೀಗೆ ಜೀವನಕ್ಕೊಂದು ಆದರ್ಶವನ್ನು ಇಟ್ಟುಕೊಂಡು ಅನುಷ್ಠಾನಗೈಯ್ಯಬೇಕು. ಅದಕ್ಕಾಗಿ ವ್ಯವಸ್ಥಿತವಾಗಿ ಕಾರ್ಯೋನ್ಮುಖರಾಗಬೇಕು. ಹೃದಯವಂತಿಕೆ, ಸಹಾನುಭೂತಿ, ಇಚ್ಛಾಶಕ್ತಿಯಿಂದ ಮನುಷ್ಯ ಪ್ರಗತಿಪಥದಲ್ಲಿ ಮುನ್ನಡೆಯಬಹುದು. ಅಧ್ಯಾತ್ಮದ ತಳಹದಿಯ ಮೇಲೆ ನಿರ್ಮಿತ ವಾದ ಭಾರತದ ಸೌಧವು ಪಾಶ್ಚಾತ್ಯರ ಭೋಗಸಂಸ್ಕೃತಿಯ ಅನುಕರಣೆಯಿಂದ ಸರ್ವನಾಶವಾಗುವುದು ಎಂದು ವಿವೇಕಾ ನಂದರು ಭವಿಷ್ಯ ನುಡಿದಿರುವರು. ಮನುಷ್ಯರು ತಮ್ಮ ಭವಿಷ್ಯಕ್ಕೆ ತಾವೇ ಹೊಣೆಗಾರರಾಗಬೇಕು. ನಮ್ಮ ಪೂರ್ವಾರ್ಜಿತ ಸ್ವತ್ತಾದ ಅಧ್ಯಾತ್ಮ ವಿದ್ಯೆಯಿಂದ ನಾವೂ ಬದುಕಿ, ಜಗತ್ತನ್ನೂ ಬದುಕಿಸ ಬೇಕಾಗಿದೆ ಎಂದು ಅವರು ಜನರಿಗೆ ಕರೆಯಿತ್ತಿದ್ದಾರೆ. ಆ ಕಾರ್ಯ ದಲ್ಲಿ ತೊಡಗುವ ಸಂನ್ಯಾಸಿಗಳಿಗೆ, ಕಾರ್ಯಕರ್ತರಿಗೆ ತರಬೇತಿ ಅವಶ್ಯಕವಾಗಿದೆ ಎಂದಿರುವರು. ಯಾವುದೇ ಧರ್ಮವನ್ನು ಕಲಕದೆ ಅದು ಆಧ್ಯಾತ್ಮಿಕ ಸಾಕ್ಷಾತ್ಕಾರದ ಮಾರ್ಗವಾಗುವಂತೆ ಅದನ್ನು ಮುನ್ನಡೆಸಬೇಕು. ಪರಮಾತ್ಮನೊಂದಿಗೆ ಒಂದಾಗುವುದೇ ಮನುಷ್ಯರ ಬದುಕಿನ ಆತ್ಯಂತಿಕ ಗುರಿಯಾಗಿದೆ. ಎಲ್ಲದರಲ್ಲಿಯೂ ಭಗ ವಂತನನ್ನು ಕಾಣುವ, ಅವರಿಗೆ ಸಹಾಯಕವಾಗುವಲ್ಲಿ ಭಕ್ತಿಯನ್ನು ಸಮರ್ಪಿಸುವ ಮನೋಭಾವ ಮನುಷ್ಯರದಾಗಬೇಕು. ಸ್ವಾರ್ಥತೆಯ ಅಳಿವಿನಿಂದ ದೊರೆಯುವ ಸುಖವೇ ಆತ್ಮಸುಖವಾಗಿದೆ. ಅದನ್ನು ಸಾಧಿಸಬೇಕಾದರೆ ಮನುಷ್ಯ ಮೊದಲು ತನ್ನಲ್ಲಿ ತಾನು ನಂಬಿಕೆಯಿಡಬೇಕು. ಅದೇ ಶ್ರದ್ಧೆ. ಅಪರಿಮಿತ ಶಕ್ತಿಯಡಗಿರುವ ಮನುಷ್ಯ ದುರ್ಬಲನಲ್ಲ; ಅಪಾರ ಶಕ್ತಿಶಾಲಿ; ಬಲಶಾಲಿ; ಪುಣ್ಯಶಾಲಿ. ಆತ ಸ್ವತಂತ್ರವಾಗಿ ಆಲೋಚಿಸಿ, ವಿಮರ್ಶಿಸಿ ಮೌಢ್ಯದಿಂದ ಮುಕ್ತನಾಗಿ ವಿಚಾರಶೀಲನಾಗಬೇಕು. ಅವನ ಅಂತಃಶಕ್ತಿಯೇ ಅವನ ಸ್ಫೂರ್ತಿಯ ಸೆಲೆ. ಅವನ ಆತ್ಮಶಕ್ತಿಯೇ ಅವನ ಉದ್ಧಾರದ ನೆಲೆ. ಮನುಷ್ಯ ತಾನು ಮಾಡಿದ ತಪ್ಪುಗಳ

ಮೂಲಕ ಪಾಠ ಕಲಿಯುತ್ತ ದೇವನಾಗಬೇಕು. ಸೋಲು ಸಹಜ. ಸೋಲೇ ಗೆಲುವಿನ ಹಾದಿಗೆ ಪ್ರೇರಕವಾಗಬೇಕು. ಹೋರಾಟವೇ ದೊಡ್ಡ ಪಾಠವಾಗಿದೆ. ತತ್ತ್ವಬದ್ಧರಾಗಿರುವವರೆಗೂ ಮನುಷ್ಯರಿಗೆ ಸೋಲೆಂಬುದಿಲ್ಲ. ಯಾರು ಪರರಿಗೋಸ್ಕರ ಬಾಳುವರೋ ಅವರು ಬದುಕಿರುವರು; ಉಳಿದವರು ಬದುಕಿರುವುದಕ್ಕಿಂತ ಹೆಚ್ಚಾಗಿ ಸತ್ತಿರುವರು. ಭಗವಂತನನ್ನು ಹುಡುಕಿಕೊಂಡು ಅಲೆಯಬೇಕಿಲ್ಲ; ದೀನರು ದರಿದ್ರರೇ ಭಗವಂತನ ಸ್ವರೂಪಿಗಳು. ಆತ್ಮನಿಗೂ ದೇವನಿಗೂ ಇರುವ ಸಂಬಂಧವೇ ಧರ್ಮ. ತ್ಯಾಗ, ಸೇವೆಗಳ ಮೂಲಕ ಜನಜಾಗೃತಿಗಾಗಿ ನಿರಂತರ ಪ್ರಯತ್ನಿಸಬೇಕು ಎಂಬಿತ್ಯಾದಿ ಚಿಂತನೆಗಳಿಂದ ಸ್ವಾಮಿ ವಿವೇಕಾನಂದರು ಆಧುನಿಕ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ನೀಡುವ ದ್ರಷ್ಟಾರರಾಗಿ ಕಂಗೊಳಿಸುತ್ತಾರೆ.

ಸ್ವಾಮಿ ವಿವೇಕಾನಂದರ ಚಿಂತನೆಗಳು ಇಂದಿನ ಬದುಕಿಗೆ ಹಾಗೂ ವ್ಯಕ್ತಿಕೇಂದ್ರಿತ ಸಮಸ್ಯೆಗಳಿಗೆ ಪರಿಹಾರೋಪಾಯಗಳಾಗಿವೆ. ಬಹಳ ಮುಖ್ಯವಾಗಿ ಇಂದು ಮನುಷ್ಯರಲ್ಲಿ ಕೊರತೆಯಿರುವ ಆತ್ಮವಿಶ್ವಾಸವನ್ನು ಹತ್ತು ಹಲವು ಮುಖಗಳಲ್ಲಿ ತುಂಬುವ ಕೆಲಸವನ್ನು ಸ್ವಾಮಿ ವಿವೇಕಾನಂದರು ಅತ್ಯಂತ ಆತ್ಮೀಯ ನೆಲೆಯಲ್ಲಿ, ಖಂಡಿತವಾದ ತಾರ್ಕಿಕ ಮಾತುಗಳಿಂದ ಮಾಡಿರುವರು. "ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ, ಪುರುಷಸಿಂಹಗಳಾಗಿರಿ" ಎಂಬಿತ್ಯಾದಿಯಾಗಿ ಅಜ್ಞಾನದ ಕೂಪದಲ್ಲಿ ಮುಳುಗಿರುವ ದೇಶಬಾಂಧವರನ್ನು ಎಚ್ಚರಿಸುವ ಅಪಾರ ದೇಶಾಭಿಮಾನ, ದೇಶಭಕ್ತಿ ಸ್ವಾಮಿ ವಿವೇಕಾನಂದರದು. ಅವರು ಬದುಕಿನ ಸಾರವನ್ನು ತಮ್ಮದೇ ಆದ ಗಂಡೆದೆಯ ಭಾಷೆಯ ಮೂಲಕ ಬಿತ್ತರಿಸಿ ಜನಸಾಮಾನ್ಯರ ಬದುಕನ್ನು ಉದ್ಧರಿಸುವ ವೀರ ಸಂನ್ಯಾಸಿಯಾಗಿರುವರು. ತರ್ಕಕ್ಕೆ ಮೀರಿದ ಅನುಭವವೇ ದೇವರಾಗಿ, ಸತ್ಯವನ್ನು ಅರಿಯುವ ಬದುಕೇ ಧರ್ಮವಾಗಿ, ದರಿದ್ರನಲ್ಲಿಯೇ ನಾರಾಯಣನನ್ನು ಕಾಣುವ ಮಾನವೀಯ ಧರ್ಮ ಅವರದು. ಇಂದ್ರಿಯಗ್ರಾಹ್ಯ ಪ್ರಪಂಚವನ್ನು ಒಳಗೊಂಡು, ಇಂದ್ರಿಯಾತೀತ ಪ್ರಪಂಚದಲ್ಲಿ ವಿಹರಿಸುವುದೇ ಧರ್ಮದ ಸಾರವೆಂದರು. ವ್ಯಷ್ಟಿಯ ಪೂರ್ಣ ಅರಿವು ಸಮಷ್ಟಿಯ ಸಮಗ್ರ ಅರಿವಿನ ನೆಲೆಯಲ್ಲಿ ಮಾತ್ರ ಸಾಧ್ಯವೆಂದರು.

ಧರ್ಮದ ಸಾಧನೆಯ ಸಿದ್ಧಿಯಲ್ಲಿ ಸ್ವಾಮಿ ವಿವೇಕಾನಂದರದು ಸಂತನ ಮನೋಧರ್ಮ. ವೇದಾಂತವನ್ನೆಲ್ಲಾ ಅರೆದು ಕುಡಿದು ಮಹಾಜ್ಞಾನಿಯಾಗಿದ್ದ ಅವರು, ಅದನ್ನು ಪಾಶ್ಚಾತ್ಯ ಸಿದ್ಧಾಂತಗಳೊಡನೆ ಹೋಲಿಸಿ ಅದರ ಮಹತ್ವವನ್ನು ತಮ್ಮ ಭಾಷಣ ಹಾಗೂ ಬರಹಗಳ ಮೂಲಕ ಪ್ರಪಂಚದಾದ್ಯಂತ ಎತ್ತಿಹಿಡಿದರು. ಕೆಚ್ಚೆದೆಯ ದಿಟ್ಟ ಸಂನ್ಯಾಸಿಯಾದ ಅವರು ಭಾರತದ ಆಧ್ಯಾತ್ಮಿಕ ಸಂಪತ್ತನ್ನು ದೇಶ ವಿದೇಶಗಳಲ್ಲಿ ಪರಿಚಯಿಸಿ, ಜಯಭೇರಿಯನ್ನು ಹೊಡೆದರು. ಆಧ್ಯಾತ್ಮಿಕ ಜ್ಞಾನಸಂಪತ್ತನ್ನು ಅವರು ತಿಳಿದು ಅರ್ಥ ಮಾಡಿಕೊಂಡಿದ್ದಷ್ಟೇ ಅಲ್ಲದೇ ಅದನ್ನು ರಕ್ತಗತವಾಗಿಸಿಕೊಂಡು ಆಚರಿಸಿ ಮಹಾನ್ ಸಂತರಾದರು. ಆ ಪರಮಾನಂದವನ್ನು ತಾವು ಮಾತ್ರ ಅನುಭವಿಸದೆ, ಲೋಕದ ಸರ್ವರಿಗೂ ಉಣಬಡಿಸಬೇಕೆಂಬ ಲೋಕಾನುಕಂಪೆಯಿಂದ ನಾಡಿನುದ್ದಕ್ಕೂ, ಪ್ರಪಂಚದಾದ್ಯಂತಕ್ಕೂ ಸಂಚರಿಸಿ ಎಲ್ಲೆಲ್ಲೂ ಜಾಗೃತಿಯ ಕಹಳೆಯನ್ನೂದಿದರು. ಅಜ್ಞಾನಿಗಳಿಗಾಗಿ ಮರುಗಿದರು; ಚಿಂತಿಸಿದರು; ಕಾರ್ಯತತ್ಪರರಾದರು. ಅವರ ತತ್ತ್ವಗಳನ್ನೆಲ್ಲಾ ಕೂಲಂಕಷವಾಗಿ ಅಭ್ಯಸಿಸಿ ಆ ಸಾಧನಾ ಪಥದಲ್ಲಿ ಮುನ್ನಡೆಯಬೇಕಾದ ಹೊಣೆಗಾರಿಕೆ ಇಂದು ಎಲ್ಲರ ಮೇಲಿದೆ.

## ಸೊಗಸಾದ ಮಂಚದ ಮೇಲೆ ಮಲಗಿಸುವೆ!

**ಸ್ವಾಮಿ ಶುದ್ಧಾನಂದರು ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ನಡುವೆ ನಡೆದ ಒಂದು ಮನೋಜ್ಞ ಘಟನೆಯನ್ನು ಕುರಿತು ಹೀಗೆ ಬರೆಯುತ್ತಾರೆ: ನರೇಂದ್ರ ಶ್ರೀರಾಮಕೃಷ್ಣರ ಬಳಿಗೆ ನಿತ್ಯವೂ ಹೋಗುತ್ತಿದ್ದನು. ಆ ಸಮಯದಲ್ಲಿ ನರೇಂದ್ರನು ತಲೆಗೂದಲನ್ನು ಶೋಕಿಲಾಲನಂತೆ ಕತ್ತರಿಸಿಕೊಂಡಿದ್ದನು. ಶ್ರೀರಾಮಕೃಷ್ಣರು ಏನೂ ಮಾತನಾಡದೆ, ಅವನ ಸೊಗಸುಗಾರಿಕೆಯೆಡೆಗೆ ಗುರುತು ಮಾಡಿ ತೋರಿಸಿದರು. ಅದಕ್ಕೆ ನರೇಂದ್ರನು, ಶ್ರೀರಾಮಕೃಷ್ಣರ ಸೊಗಸಾದ ಚಪ್ಪಲಿ, ಗುಡುಗುಡಿ, ಮೆತ್ತನೆಯ ಹಾಸಿಗೆ ಮತ್ತು ತಲೆದಿಂಬು ಮುಂತಾದವುಗಳೆಡೆಗೆ ಬೆಟ್ಟುಮಾಡಿ ತೋರಿಸಿದನು. ಆಗ ಶ್ರೀರಾಮಕೃಷ್ಣರು ನರೇಂದ್ರನನ್ನು ಕುರಿತು ಹೀಗೆ ಹೇಳಿದರು, "ನೋಡು, ನಾನು ಭಗವಂತನ ಸಾಕ್ಷಾತ್ಕಾರಕ್ಕಾಗಿ ಎಂತಹ ತೀವ್ರ ತಪಸ್ಸು ಮಾಡಿದೆ, ನೀನು ಅದರಲ್ಲಿ ಕೇವಲ ಹದಿನಾರನೆಯ ಒಂದು ಭಾಗವನ್ನು ಮಾಡಿದರೂ, ನಾನು ನಿನ್ನನ್ನು ಅನೇಕ ಮೆತ್ತನೆಯ ಹಾಸಿಗೆಗಳಿರುವ ಸೊಗಸಾದ ಮಂಚದ ಮೇಲೆ ಮಲಗಿಸುವೆ."**

**ಶ್ರೀರಾಮಕೃಷ್ಣರ ಜೀವನದಿಂದ ಸ್ಫೂರ್ತಿ ಪಡೆದ ನಂತರ ನರೇಂದ್ರನು ಅನೇಕ ವರ್ಷಗಳ ಕಾಲ ತೀವ್ರ ತಪಸ್ಸು ಮಾಡಿದನು. ಅಮೆರಿಕಾದಲ್ಲಿ ವೇದಾಂತದ ಸಂದೇಶವನ್ನು ಸಾರಿ ವಿಜಯದುಂದುಭಿಯನ್ನು ಹಾರಿಸಿ ಭಾರತಕ್ಕೆ ಮರಳಿಬಂದಾಗ, ಸ್ವಾಮೀಜಿಯ ಪಾಶ್ಚಾತ್ಯ ಶಿಷ್ಯರು ಒಂದು ಸ್ಪ್ರಿಂಗ್‌ಮಂಚ ಹಾಗೂ ಮೆತ್ತನೆಯ ಹಾಸಿಗೆಯನ್ನು ಬಳುವಳಿಯಾಗಿ ಕೊಟ್ಟರು (ಈಗಲೂ ಇವನ್ನು ಬೇಲೂರು ಮಠದಲ್ಲಿರುವ ಸ್ವಾಮಿ ವಿವೇಕಾನಂದರ ಕೋಣೆಯಲ್ಲಿ ನೋಡಬಹುದು). ಆ ಹಾಸಿಗೆಯನ್ನು ಉಪಯೋಗಿಸುವ ಸಮಯದಲ್ಲಿ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರು ತಮಗೆ ಹಿಂದೆ ಇತ್ತ ಭಾಷೆಯನ್ನು ನೆನಪಿಸಿಕೊಳ್ಳುತ್ತ, ತಮ್ಮ ಸುತ್ತಲೂ ಇದ್ದ ಗುರುಭಾಯಿಗಳಿಗೆ ಹೇಳುವ ಸಮಯದಲ್ಲಿ ಕಣ್ಣೀರು ಸುರಿಸುತ್ತಿದ್ದರು.**

**ಇನ್ನೊಂದು ಘಟನೆ ಹೀಗಿದೆ: ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶದಲ್ಲಿ ವೇದಾಂತದ ಸಂದೇಶವನ್ನು ಸಾರಿ ವಿಜಯ ಪತಾಕೆ ಹಾರಿಸಿ ಭಾರತಕ್ಕೆ ಮರಳಿದಾಗ, ಕೊಲ್ಕತಾದಲ್ಲಿ ಅವರಿಗಾಗಿ ಅದ್ದೂರಿ ಸ್ವಾಗತ ಕಾದಿತ್ತು. ಬಂದ ಭಕ್ತರನ್ನು ಉದ್ದೇಶಿಸಿ ಸ್ವಾಮೀಜಿ ತಮ್ಮ ಗುರುವಿನ ಬಗ್ಗೆ ಮಾತನಾಡುತ್ತ ಹೀಗೆ ಹೇಳುತ್ತಾರೆ: "ನಾನು ಕಾಯಾ ವಾಚಾ ಮನಸಾ ಏನನ್ನಾದರೂ ಸಾಧಿಸಿದ್ದರೆ, ಪ್ರಪಂಚದಲ್ಲಿ ಯಾರಿಗಾದರೂ ಸಹಾಯವಾಗುವಂತೆ ಒಂದೇ ಒಂದು ಪದವಾದರೂ ನನ್ನ ಮುಖದಿಂದ ಬಂದಿದ್ದರೆ ಅದು ನನ್ನದಲ್ಲ, ಅವರದು. ಯಾವುದು ದುರ್ಬಲವೋ ಅದು ನನ್ನದು. ಯಾವುದು ಜೀವಶಕ್ತಿಯೋ, ಪವಿತ್ರವೋ ಅವೆಲ್ಲಾ ಅವರ ಸ್ಫೂರ್ತಿಯಿಂದ ಬಂದದ್ದು. ಅವೆಲ್ಲ ಅವರ ಮಾತುಗಳೇ, ಅವರವೇ... ದಯವಿಟ್ಟು ನನ್ನನ್ನು ನೋಡಿ ಅವರನ್ನು ಅಳೆಯಬೇಡಿ. ನಾನೊಂದು ದುರ್ಬಲ ಯಂತ್ರ. ನನ್ನಿಂದ ಅವರ ಶೀಲವನ್ನು ಅಳೆಯಬೇಡಿ. ಅವರೆಂಥ ಮಹಾನುಭಾವರೆಂದರೆ, ನಾನು ಅಥವಾ ಅವರ ಇತರೆ ಶಿಷ್ಯರು ನೂರಾರು ಜನ್ಮಗಳನ್ನು ತಳೆದರೂ ಅವರ ನೈಜಸ್ವರೂಪದ ಹತ್ತು ಲಕ್ಷದ ಒಂದು ಭಾಗವನ್ನೂ ತಿಳಿಯಲಾಗುವುದಿಲ್ಲ!" (ಸಂಗ್ರಹ : ಕುಮಾರಿ ಸ್ವರ್ಣಗೌರಿ, ಮೈಸೂರು)**

# ಸ್ವಾಮಿ ವಿವೇಕಾನಂದರ ಸಂಗೀತ ಪ್ರತಿಭೆ

ಪ್ರೊ. ಕೆ.ಬಿ. ಪ್ರಭುಪ್ರಸಾದ್

**ಸ್ವಾಮಿ ವಿವೇಕಾನಂದರ ಅಗಣಿತ ಪ್ರತಿಭೆಗಳಲ್ಲಿ ಸಂಗೀತವೂ ಒಂದು. ಅದು ವಿದ್ವತ್ತಿನ ಸಂಗೀತವಾಗಿರಲಿಲ್ಲ; ದೈವಾನುಭೂತಿಯ ಸುಲಲಿತ ಮಾಧ್ಯಮವಾಗಿತ್ತು. ಸ್ವಾಮೀಜಿಯವರ ಬಾಲ್ಯದಿಂದಲೂ ಅಭಿವ್ಯಕ್ತವಾದ ಅವರ ವ್ಯಕ್ತಿತ್ವದ ಈ ಅಪೂರ್ವ ಅಂಶವನ್ನು ಸವಿವರವಾಗಿ ಪರಿಚಯ ಮಾಡಿಕೊಟ್ಟಿರುವ ಲೇಖಕರು ನಿವೃತ್ತ ಕಾಲೇಜು ಪ್ರಾಂಶುಪಾಲರು; ಕನ್ನಡದ ಹಿರಿಯ ಸಾಹಿತಿಗಳು. ಇದಲ್ಲದೆ ಅವರು ಸಂಗೀತಾಭಿಮಾನಿಗಳು ಕೂಡ.**



**ಸ್ವಾ**ಮಿ ವಿವೇಕಾನಂದರು ಜಗತ್ಪ್ರಸಿದ್ಧರಾದುದು, ಯುವಕರ ಆದರ್ಶನಾಯಕರು ಎಂದೆನಿಸಿಕೊಂಡುದು, ಅಮೆರಿಕೆಯ ಶಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮಗಳ ಮಹಾಧಿವೇಶನದಲ್ಲಿ (೧೮೯೩, ಸೆಪ್ಟೆಂಬರ್, ೧೧) ಮಾತನಾಡಿ ಭಾರತದ ಕೀರ್ತಿಪತಾಕೆಯನ್ನು ಹಾರಿಸಿದುದು ಅವರ ವ್ಯಕ್ತಿತ್ವದ ಒಂದು ಮುಖ ಅಷ್ಟೆ.

ಸ್ವಾಮಿ ವಿವೇಕಾನಂದರು ಬಹುಮುಖ ಪ್ರತಿಭಾಶಾಲಿ ಎಂಬುದು ಅವರ ಜೀವನ ಮತ್ತು ಸಾಧನೆಗಳನ್ನು ಪೂರ್ಣವಾಗಿ ಬಲ್ಲವರಿಗೆ ಮಾತ್ರ ಗೊತ್ತು. ಅವರು ಮಹಾಮೇಧಾವಿ, ಬಹುಶ್ರುತ ವಿದ್ವಾಂಸ, ಅತ್ಯದ್ಭುತ ಸ್ಮರಣಶಕ್ತಿಯುಳ್ಳವರು, ಅಪ್ರತಿಹತ ವಾಗ್ಮಿ, ಮಹಾತ್ಯಾಗಿ, ಅದ್ವಿತೀಯ ಅಧ್ಯಾತ್ಮಸಾಧಕ. ಅಷ್ಟೇ ಅಲ್ಲ, ದರ್ಶನ ದೃಷ್ಟಿಯಿರುವ ಮಹಾಪ್ರವಾದಿ ಕೂಡ. ಎಂಥವರನ್ನೂ ಬೆರಗುಗೊಳಿಸುವ, ಆಕರ್ಷಿಸುವ ಭಾಷಣ ಕಲೆ ಹಾಗೂ ಅಸಾಧಾರಣ ನೆನಪಿನ ಶಕ್ತಿ ಅವರಲ್ಲಿದ್ದುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಸಂಗತಿ. ಚರ್ಚೆ, ಸಂಭಾಷಣಾಚಾತುರ್ಯ, ಯಾವುದೇ ವಿಷಯವಾದರೂ ಅಧಿಕೃತ ಮಾಹಿತಿಯ ಮತ್ತು ಸತ್ಯಸಂಗತಿಗಳ ಆಧಾರಸಹಿತವಾಗಿ ವಾದಮಾಡಿ ಗೆಲ್ಲುವ ಸಾಮರ್ಥ್ಯ ಅವರಲ್ಲಿದ್ದುದೂ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಮಧುರವಾದ, ಶಕ್ತಿಯುತವಾದ ಕಂಠದಿಂದ ಬಹಳ ಚೆನ್ನಾಗಿ ಹಾಡುತ್ತಿದ್ದರು ಎಂಬುದೂ ತಿಳಿದ ವಿಚಾರ. ಅವರ ಕಾವ್ಯಪ್ರತಿಭೆ ಬಹಳ ಜನರಿಗೆ ಅಷ್ಟಾಗಿ ಗೊತ್ತಿರಲಾರದು. ಅವರ ಹಲವಾರು ಕವಿತೆಗಳು ಸ್ಫೂರ್ತಿದಾಯಕವಾಗಿವೆ. ಅವರದು ಕವಿ ಹೃದಯವೂ ಹೌದು, ಋಷಿಹೃದಯವೂ ಹೌದು. ಅವರದು ತೀಕ್ಷ್ಣವಾದ ಬುದ್ಧಿ, ಹಾಗೆಯೇ ಬೆಣ್ಣೆಯಂತೆ ಕರಗುವ ಹೃದಯ.

ಇದಲ್ಲದೆ, ಸ್ವಾಮಿ ವಿವೇಕಾನಂದರು ಶಾಸ್ತ್ರೀಯ ಸಂಗೀತದ ಆಳವಾದ ಪರಿಚಯವಿದ್ದ ಪ್ರತಿಭಾವಂತ ಗಾಯಕರು, ವಾಗ್ಗೇಯಕಾರರು ಎಂಬ ವಿಚಾರ ಹಾಗೂ ನೃತ್ಯಕಲೆಯಲ್ಲೂ ಪರಿಣಿತರಾಗಿದ್ದರು ಎಂಬ ವಿಚಾರ ಬಹುಜನರಿಗೆ ಗೊತ್ತಿಲ್ಲ. ಇನ್ನೊಂದು ವಿಸ್ಮಯದ ಸಂಗತಿಯೆಂದರೆ, ಚಿಕ್ಕಂದಿನಲ್ಲಿಯೇ ನರೇಂದ್ರ (ಮುದ್ದಿನ ನರೇನ್) ಸುಂದರವಾಗಿ ಚಿತ್ರಬಿಡಿಸುವುದರಲ್ಲಿ, ಚಿತ್ತಾಕರ್ಷಕವಾಗಿ ಹಾಡುವುದರಲ್ಲಿ ಬಾಲಪ್ರತಿಭೆಯನ್ನು ಪ್ರಕಟಗೊಳಿಸಿದ್ದ. ತಂದೆ ವಿಶ್ವನಾಥ ದತ್ತ ಸಂಗೀತದಲ್ಲಿ ವಿಶೇಷ ಅಭಿರುಚಿಯಿದ್ದವರು. ಶಾಸ್ತ್ರೀಯ ಸಂಗೀತವನ್ನು ತುಂಬಾ ಇಷ್ಟಪಡುತ್ತಿದ್ದುದಲ್ಲದೆ, ಸ್ವತಃ ಶಾಸ್ತ್ರೀಯ ಸಂಗೀತವನ್ನು ಕ್ರಮಬದ್ಧವಾಗಿ ಕಲಿತಿದ್ದು, ಉತ್ತಮ ಗಾಯಕರೂ ಆಗಿದ್ದರು. ಮಗನಲ್ಲಿ ಹುದುಗಿದ್ದ ಸಂಗೀತ ಪ್ರತಿಭೆಯನ್ನು ಗುರುತಿಸಿ ಕೂಡಲೆ ಅದರ ವಿಕಾಸದ ಕಡೆ ಗಮನ ಹರಿಸಿದರು. ವಿವಿಧ ರಾಗಗಳ ಅನೇಕ ಹಾಡುಗಳನ್ನು ಮಗನಿಗೆ ಹೇಳಿಕೊಟ್ಟರು. ಅಲ್ಲದೆ ಕೊಲ್ಕತಾದ ಸುಪ್ರಸಿದ್ಧ ಗವಾಯಿ ಅಹ್ಮದ್ ಖಾನ್ ಎಂಬುವವರಿಂದ ಮಗನಿಗೆ ಶಾಸ್ತ್ರೀಯ ಸಂಗೀತ ಪಾಠ ಹೇಳಿಸಿದರು. ಕ್ರಮಬದ್ಧವಾದ ಪಾಠಗಳಲ್ಲದೆ, ನರೇನ್, ಗುರುಗಳಿಂದ ಹಲವಾರು ಹಿಂದಿ, ಉರ್ದು, ಪರ್ಷಿಯನ್ ಹಾಡುಗಳನ್ನೂ ಕಲಿತುಕೊಂಡ. ಕೆಲವು ಕಾಲದ ಬಳಿಕ ಉಜಿರ್‌ಖಾನ್, ಧುನ್ನೀಖಾನ್, ಕನ್ಹಯ್ಯಲಾಲ್ ಧೇಂಡಿ, ಪಂಡಿತ್ ಜಗನ್ನಾಥ ಮಿಶ್ರ – ಇವರುಗಳಿಂದಲೂ ನರೇಂದ್ರನಿಗೆ ಸಂಗೀತ ಪಾಠವಾಯಿತು. ಹಾಡುಗಾರಿಕೆಯಲ್ಲದೆ, ತಬಲಾ, ಪಕ್ವಾಜ್, ಸಿತಾರ್, ಏಸ್ರಾಜ್ ವಾದ್ಯಗಳನ್ನೂ ಚೆನ್ನಾಗಿ ನುಡಿಸುವುದನ್ನು ಕಲಿತ. ಮುಖ್ಯವಾಗಿದ್ದುದು ಹಾಡುಗಾರಿಕೆಯೆ. ಅವನ ಕಂಠ ದೈವದತ್ತವಾಗಿ ಮಧುರವಾಗಿತ್ತು. ಗುರುಗಳೂ ಸಹ ಅವನಿಗೆ ಶ್ರೇಷ್ಠ ಗಾಯಕನಾಗುವಂತೆ ತರಬೇತಿಕೊಟ್ಟರು. ಅವನೂ ಶ್ರದ್ಧೆಯಿಂದ ಅಭ್ಯಾಸ ಮಾಡಿದ. ನರೇನ್ ಮನೋಧರ್ಮದ ಸಂಗೀತವನ್ನೇ ಬೆಂಬಲಿಸುತ್ತಿದ್ದ. ತಾನು ಯಾವ ಯಾವ ಭಾವದಲ್ಲಿರುತ್ತಿದ್ದನೋ ಅದಕ್ಕೆ ತಕ್ಕ ರಾಗಗಳನ್ನಾಯ್ದು ಭಾವಪೂರ್ಣವಾಗಿ ಹಾಡುತ್ತಿದ್ದ. ಮನೆಯವರೆಲ್ಲರೂ ಕುಳಿತು ಕೇಳುತ್ತ ನರೇನ್‌ನ ಸಂಗೀತವನ್ನು ಸವಿಯುತ್ತಿದ್ದರು. ಆಗೊಮ್ಮೆ ಈಗೊಮ್ಮೆ ತಂದೆಯೂ ಕುಳಿತು ಕೇಳಿ ಸಂತೋಷಪಡುತ್ತಿದ್ದರು.

ನರೇಂದ್ರ ಶ್ರದ್ಧೆ – ಉತ್ಸಾಹಗಳಿಂದ ಗಂಟೆಗಟ್ಟಲೆ ಸಂಗೀತಾಭ್ಯಾಸ ಮಾಡುತ್ತಿದ್ದರೆ, ಅವನ ಸ್ನೇಹಿತರೆಲ್ಲ ಕುಳಿತು ಕೇಳುವರು. ಓದಿನಲ್ಲಿ, ಆಟದಲ್ಲಿ, ನಾನಾ ಬಗೆಯ ಕಸರತ್ತು ವ್ಯಾಯಾಮಗಳಲ್ಲಿ ನರೇಂದ್ರನೇ ಎಲ್ಲರಿಗಿಂತ ಹೆಚ್ಚಿನ ಕೌಶಲ–ಪರಿಣತಿಗಳನ್ನು ತೋರಿಸುತ್ತಿದ್ದ. ಯಾವ ವಿದ್ಯೆಯನ್ನಾದರೂ ಬೇಗ ಗ್ರಹಿಸುವ ಶಕ್ತಿಯಿಂದ ಜಾಣನಾಗಿದ್ದ.

ಸಂಗೀತದ ಬೈಠಕ್‌ಗಳಲ್ಲಿ ಒಂದು ಸಲ ಕೇಳಿದ ಹಾಡುಗಳು ಅವನ ಮನದಲ್ಲಿ ಚಿರಮುದ್ರಿತವಾಗಿ ಬಾಯಿಗೆ ಬರುತ್ತಿದ್ದವು.

"ಕೇವಲ ಶ್ರುತಿಶುದ್ಧವಾಗಿ, ಲಯಬದ್ಧವಾಗಿ ಹಾಡಿದ ಮಾತ್ರಕ್ಕೆ, ವಿದ್ವತ್ಪ್ರದರ್ಶನ ಮಾಡಿ ಬೆರಗುಗೊಳಿಸಿದ ಮಾತ್ರಕ್ಕೆ ಸಂಗೀತ ಸಾರ್ಥಕವಾಗುವುದಿಲ್ಲ. ಅದೂ ಸಹ ದೈವಸಾಕ್ಷಾತ್ಕಾರದ ಮಾರ್ಗಗಳಲ್ಲಿ ಒಂದು ಮಾರ್ಗ. ಮನರಂಜನೆಗಾಗಿ ಹಾಡಿದರೂ ಒಂದು ಉನ್ನತ ಭಾವವನ್ನು ಮೂಡಿಸುವಂತಿರಬೇಕು" ಎಂದು ನರೇಂದ್ರ ತನ್ನ ಸಂಗೀತಮಿತ್ರರಿಗೆ ಹೇಳುತ್ತಿದ್ದ. ಹಾಡುವವರು ಹಾಡಿನ ಅರ್ಥ – ಭಾವಗಳನ್ನು ಗ್ರಹಿಸಿ, ಸ್ವತಃ ಅನುಭವಿಸಿ ನಿರವಿಸಬೇಕು; ಸಾಹಿತ್ಯಕ್ಕೆ ಅಪಚಾರವಾಗದಂತೆ ಹಾಡಬೇಕು, ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಬೇಕು ಎಂದೂ ಸೂಚಿಸುತ್ತಿದ್ದ. ತಾನು ಸ್ವತಃ ಈ ಅಂಶಗಳನ್ನೆಲ್ಲ ತನ್ನ ಹಾಡುಗಾರಿಕೆಯಲ್ಲಿ ಅನುಸರಿಸುತ್ತಿದ್ದ. ಅವನು ಯಾವುದಾದರೂ ರಾಗದ ಹಾಡನ್ನು ಹಾಡುತ್ತಿದ್ದರೆ, ಆ ರಾಗದ ಅಧಿದೇವತೆಯೇ ಮೈತಳೆದು ನಿಂತಂತೆ ಭಾಸವಾಗುತ್ತಿತ್ತು. ಗುರುವನ್ನೂ ದೇವರನ್ನೂ ಸುಪ್ರೀತಗೊಳಿಸಿ ಒಲಿಸಿಕೊಳ್ಳುವುದಕ್ಕೆ ನರೇಂದ್ರನ ಗಾಯನ ಬಹಳ ಸಹಾಯಕ ವಾಯಿತು.

ಅವನ ಸುಮಧುರ ಕಂಠದ ಸಂಗೀತವೇ ಒಂದು ಸಲ ಎಂಥಾ ಪೇಚಿಗೆ ಅವನನ್ನು ಸಿಲುಕಿಸಿತು ಎಂಬುದು ರೋಚಕವಾಗಿದೆ. ನರೇಂದ್ರ ಬಿ.ಎ. ಪರೀಕ್ಷೆಗೆ ಶ್ರದ್ಧೆಯಿಂದ ಓದುತ್ತಿರುವಾಗ ನಡೆದ ಸಂಗತಿ ಇದು. ಮನೆಯಲ್ಲಿ ಜನ, ಗಲಾಟೆ ಎಂದು ಸಮೀಪದಲ್ಲಿದ್ದ ಅಜ್ಜಿಯ ಮನೆಯ ಏಕಾಂತದಲ್ಲಿ ಕುಳಿತು ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವಾಗ, ಮಧ್ಯಂತರ ವಿರಾಮದಲ್ಲಿ, ತನ್ನಷ್ಟಕ್ಕೆ ತಾನು ಜೋರಾಗಿ ಹಾಡಿಕೊಳ್ಳುತ್ತಿದ್ದ. ಎದುರು ಮನೆಯಲ್ಲೇ ಚಿಕ್ಕಪ್ರಾಯದ ಬಾಲ ವಿಧವೆಯೊಬ್ಬಳಿದ್ದಳು; ಒಂದು ಸಂಜೆ ನರೇಂದ್ರನ ಇಂಪಾದ ಸ್ವರ ಕೇಳಿ ಅವನಿದ್ದ ಕೋಣೆಯ ಹೊರಗೆ ಬಂದು ಕೇಳುತ್ತ ನಿಂತಳು. ನರೇಂದ್ರ ಈಚೆಗೆ ಬಂದಾಗ ಅವಳನ್ನು ನೋಡಿ ಅವಾಕ್ಕಾದ. ಆಕೆಯನ್ನು ಇದೇ ಮೊದಲು ಅವನು ನೋಡಿದ್ದು. ಆದರೆ ಆಕೆ ನರೇಂದ್ರನನ್ನು ಈಗಾಗಲೆ ನೋಡಿ ಆಕರ್ಷಿತಳಾಗಿದ್ದಳು. ಅವನ ರೂಪ, ವ್ಯಕ್ತಿತ್ವ, ಕಂಠಶ್ರೀಗೆ ಮಾರುಹೋಗಿದ್ದಳು. ಆ ಸಂಜೆ ನರೇಂದ್ರ, "ಇವರು ಯಾರು?" ಎಂದು ನೋಡುತ್ತಿದ್ದಾಗ ಆಕೆಯ ಕಣ್ಣು, ಹಾವಭಾವಗಳಲ್ಲಿ ಶೃಂಗಾರವಿದ್ದಂತೆ ತೋರಿಬಂದು ನರೇಂದ್ರ ತಬ್ಬಿಬ್ಬಾದ. ಮರುಕ್ಷಣ ಸಾವರಿಸಿಕೊಂಡು ಅವಳ ಕಾಲಿಗೆ ಗಕ್ಕನೆ ಬಾಗಿ, "ಅಮ್ಮ, ಅಮ್ಮ, ನೀನು ನನ್ನ ಹೆತ್ತತಾಯಿಯಿದ್ದಂತೆ" ಎಂದು ಗಟ್ಟಿಯಾಗಿ ಹೇಳತೊಡಗಿದ. ಆಕೆಗೆ ಅರ್ಥವಾಯಿತು. ತಲೆಯೆತ್ತಿ ನೋಡುವಷ್ಟರಲ್ಲಿ ಆಕೆ ಅಲ್ಲಿರಲಿಲ್ಲ. ನರೇಂದ್ರ ಮರು ದಿನವೆ ಅಜ್ಜಿಗೆ ಹೇಳಿ, ತನ್ನ ಮನೆಗೆ ಹಿಂತಿರುಗಿದ. ಮತ್ತೆ ಆ ಕಡೆ ತಲೆಹಾಕಲಿಲ್ಲ.

ಇನ್ನೊಂದು ತಮಾಷೆ ಎಂದರೆ ಬಿ.ಎ. ಪರೀಕ್ಷೆಗೆ ಎಲ್ಲ ಸಿದ್ಧತೆ ಮಾಡಿಕೊಂಡು ಮರುದಿನ ಪರೀಕ್ಷೆಗೆ ಹೋಗಬೇಕು ಎನ್ನುವಾಗ ಅವನಲ್ಲಿ ಇದ್ದಕ್ಕಿದ್ದಂತೆ ಅಧ್ಯಾತ್ಮಭಾವ ಜಾಗೃತವಾಗಿ, ಭಗವತ್ಸಾಕ್ಷಾತ್ಕಾರದ ಮಹಾನ್ ಗುರಿಯ ಮುಂದೆ ಈ ವಿದ್ಯೆಯೆಲ್ಲ ಕ್ಷುದ್ರ ಎನಿಸಿಬಿಟ್ಟಿತು. ತನ್ನ ಸಹಪಾಠಿಗಳೊಡನೆ ಕುಳಿತು ಆನಂದ ಭರಿತನಾಗಿ ಹಾಡತೊಡಗುತ್ತಾನೆ. ಈ ಅಲ್ಪವಾದ ಲೌಕಿಕ ವಿಚಾರಗಳಲ್ಲಿ ಮುಳುಗದೆ, ಜ್ಞಾನ ಸಾಗರದಲ್ಲಿ ಶರಣಾಗು ಮನವೇ" ಎಂಬ ಅರ್ಥದ ಗೀತೆಯೊಂದನ್ನು ಹಾಡುತ್ತಾನೆ. ಅದೇ ಭಾವದಲ್ಲಿ ತಲ್ಲೀನನಾಗಿರುವಾಗ, "ಇದೇನು ನರೇನ್, ನಾಳೆ ಪರೀಕ್ಷೆ ಇದೆ. ಅದರ ಯೋಚನೆ ಬಿಟ್ಟು ಹಾಡುತ್ತ ಕುಳಿತ್ತಿದ್ದೀಯಲ್ಲಾ" ಎಂಬ ಸಹಪಾಠಿಗಳ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಒಂಬತ್ತು ಗಂಟೆಗಳ ಕಾಲ ಹಾಡುತ್ತಲೆ ಇದ್ದ. ಆದರೇನು, ಮಾರನೆ ದಿನ ಪರೀಕ್ಷೆಗೂ ಹೋಗಿ ಬರೆದು, ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣನೂ ಆದುದು ಬೇರೆ ಮಾತು.

೧೮೮೦ರ ಕಾಲ. ನರೇಂದ್ರನಿಗೆ ೧೮ ವರ್ಷ. "ದೇವರು ಇರುವುದು ನಿಜವೇ? ಇದ್ದರೆ ಅವನನ್ನು ನೋಡಬೇಕು" ಎಂಬ ಭಾವ ಉತ್ಕಟವಾಗಿದೆ. ಬ್ರಹ್ಮಸಮಾಜದ ನಿರಾಕಾರ ಬ್ರಹ್ಮ ಸಿದ್ಧಾಂತವನ್ನೇ ಒಪ್ಪಿ, ಅಂತಹ ಗೀತೆಗಳನ್ನೆ ಹೋದಲ್ಲಿ ಬಂದಲ್ಲಿ ಹಾಡತೊಡಗಿದ್ದಾನೆ. ರಾಷ್ಟ್ರಭಕ್ತಿ, ಬ್ರಹ್ಮಚರ್ಯಪಾಲನೆ, ಶೀಲಸಂಪಾದನೆ ಮತ್ತು ಸರ್ವಸಮಾನತೆಯ ವಿಚಾರಗಳು ಅವನಲ್ಲಿ ತುಂಬಿವೆ. ಇದೇ ಸಮಯದಲ್ಲಿ ಶ್ರೀರಾಮಕೃಷ್ಣರ ಒಬ್ಬ ಭಕ್ತನಾದ ಸುರೇಂದ್ರನಾಥ ಮಿತ್ರ, ಅವರನ್ನು ತನ್ನ ಮನೆಗೆ ಬರಮಾಡಿಕೊಂಡಿದ್ದ. ಅಂದಿನ ಕಾರ್ಯಕ್ರಮದಲ್ಲಿ ಹಾಡಲು ನರೇಂದ್ರನನ್ನು ಕರೆಸಿಕೊಂಡಿದ್ದ. ನರೇಂದ್ರನ ದಿವ್ಯಮಧುರ ಗಾಯನ ಶ್ರೀರಾಮಕೃಷ್ಣರನ್ನು ಆಕರ್ಷಿಸಿತು. ಅವನ ವಿಚಾರಗಳನ್ನೆಲ್ಲ ಕೇಳಿ ತಿಳಿದುಕೊಂಡು ದಕ್ಷಿಣೇಶ್ವರಕ್ಕೆ ಒಮ್ಮೆ ಬಂದುಹೋಗಲು ಹೇಳಿದರು. ಅಂತೆಯೇ ಕೆಲವೇ ದಿನಗಳಲ್ಲಿ ಸುರೇಂದ್ರನಾಥ ಮಿತ್ರ ತನ್ನ ಸಾರೋಟಿನಲ್ಲೇ ನರೇಂದ್ರನನ್ನು ದಕ್ಷಿಣೇಶ್ವರಕ್ಕೆ ಕರೆದೊಯ್ಯುತ್ತಾನೆ. ಮೊದಲ ಬಾರಿಗೆ, "ದೇವರನ್ನು ಸಾಕ್ಷಾತ್ತಾಗಿ ನೋಡಿದ್ದೇನೆ. ಅವನೊಂದಿಗೆ ಮಾತಾಡಲೂಬಹುದು" ಎಂದು ಖಚಿತವಾಗಿ ಹೇಳಿದ ಒಬ್ಬ ಮಹಾಶಯರನ್ನು ನರೇಂದ್ರ ಕಂಡಂತಾಯಿತು. ಅವನ ಜೀವನದಲ್ಲಿ ಇದೊಂದು ಮಹತ್ತರವಾದ ತಿರುವು. ದೇವರನ್ನು ನೋಡಬೇಕೆಂಬ ತೀವ್ರವಾದ ಹಂಬಲವಿದ್ದ ಹೃದಯ, ತೋರಿಸಬಲ್ಲ ಸಮರ್ಥಗುರುವಿನ ಮಾರ್ಗದರ್ಶನ – ಇವೆರಡನ್ನೂ ಕೂಡಿಸಿದುದು ನರೇಂದ್ರನ ಮಧುರ ಕಂಠದ ಗಾಯನವೇ. ನರೇಂದ್ರನ ಸಂಗೀತ ಪ್ರತಿಭೆ ಇದಕ್ಕೆ ಸೇತುವಾಯಿತು.

ಶ್ರೀರಾಮಕೃಷ್ಣರೇ ನರೇಂದ್ರ ತಮ್ಮ ಬಳಿಗೆ ಬಂದ ಸಂದರ್ಭವನ್ನು ಬಹುಚೆನ್ನಾಗಿ ಹೇಳುತ್ತಿದ್ದರು. ಅವನು ಸುರೇಂದ್ರ ಮಿತ್ರನೊಂದಿಗೆ ಬಂದಾಗ, "ಈತ ಇತರರಂತಲ್ಲ, ತೀರ ಭಿನ್ನ" ಎಂದುಕೊಂಡರು. ಒಮ್ಮೆ ಆಗಲೆ ಅವನ ಹಾಡು ಕೇಳಿದ್ದ ಅವರು, ಇಲ್ಲೂ ಹಾಡಲು ಹೇಳಿದರು. ಆತ, **"ನಡೆ ಮನವೆ ನೀ ನಿಜ ಆಲಯಕೆ"** ಎಂಬ ಬ್ರಹ್ಮಸಮಾಜದ ಗೀತೆಯನ್ನು ಹೃದಯತುಂಬಿ ಭಾವಪೂರ್ಣವಾಗಿ ಹಾಡಿದ. ರಾಮಕೃಷ್ಣರು ಭಾವಸಮಾಧಿಗೇರಿದರು. ತಾವು ಕಾತರತೆ ಯಿಂದ ಎದುರು ನೋಡುತ್ತಿದ್ದ ಶಿಷ್ಯೋತ್ತಮ ಸಿಕ್ಕನೆಂಬ ಸಂತೋಷ ಗುರುವಿಗೆ. ತನ್ನ ಜೀವನದ ದಿಕ್ಕನ್ನೇ ಬದಲಿಸಿದ ಶ್ರೀಗುರು ಸಿಕ್ಕನೆಂಬ ಸಂತೋಷ ಶಿಷ್ಯನಿಗೆ !!

ನರೇಂದ್ರನ ಬಗ್ಗೆ ವಿಶೇಷವಾದ ಪ್ರೀತಿಯುಂಟಾದ ರಾಮಕೃಷ್ಣರು ಅವನನ್ನು ಮತ್ತೆ ಮತ್ತೆ ನೋಡಬೇಕು, ಸಚ್ಚಿದಾನಂದ ಸಾಮ್ರಾಜ್ಯಕ್ಕೆ ಸೇರಿದವನಾದ ಅವನೊಂದಿಗೆ ಹೆಚ್ಚು ಹೆಚ್ಚು ಕಾಲ ಕಳೆಯಬೇಕು ಎಂಬ ಹಂಬಲದಿಂದ ಹುಚ್ಚಾಗಿ ಅವನನ್ನು ಹುಡುಕಿಕೊಂಡು,